O.S. No.- 262/2021
PW-1

**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ. ದ. ನ್ಯಾ. ದಂ.ಗಳ ನ್ಯಾಯಾಲಯ, ಕಾರಟಗಿ (ಸಂಚಾರಿ ನ್ಯಾಯಾಲಯ) ಕಾರಟಗಿ .**

**ಸಾಕ್ಷಿಯನ್ನು ದಿನಾಂಕ 06.08.2024 ರಂದು ಕರೆಯಿಸಿ ಪ್ರಾಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀಸವಾಲು- ಪ್ರತಿವಾದಿಯರ ಪರ ವಕೀಲರಿಂದ-**

5. ನಾನು ಮದುವೆ ಆಗಿ ಬರುವ ಪೂರ್ವದಲ್ಲಿಯೂ ಸಹ ನಮ್ಮ ಮನೆಗೆ ವಿದ್ಯುತ್ ಸರಬರಾಜು ನಮ್ಮ ಮಾವನ ಹೆಸರಿನಲ್ಲಿ ಎರಡು ಮನೆಗೆ ಜಂಟಿಯಾಗಿ ಇತ್ತು. ದಾವಾ ಆಸ್ತಿಯನ್ನು ಸೇರಿ ವಿದ್ಯುತ್ ಸರಬರಾಜು ನಮ್ಮ ಮಾವನ ಹೆಸರಿನಲ್ಲಿ ಇತ್ತು ಎಂದರೆ ನಿಜ. ನಮ್ಮ ಮಾವ ಹನುಮಂತಪ್ಪ ನನ್ನ ಮದುವೆ ಆಗುವ ಪೂರ್ವದಲ್ಲಿ ತೀರಿಕೊಂಡಿರುತ್ತಾರೆ, ಯಾವಾಗ ತೀರಿಕೊಂಡಿರುತ್ತಾರೆ ಎಂದರೆ ಗೊತ್ತಿಲ್ಲ. ಮುದುಕಪ್ಪನ ಮಗ ರಂಗಪ್ಪ ಕಾಣೆಯಾಗಿರುತ್ತಾನೆ. ಸದರಿ ಮುದುಕಪ್ಪ ನಾನು ಮದುವೆ ಆಗಿ ಬರುವ ಪೂರ್ವದಲ್ಲಿಯೇ ಹೋಗಿರುತ್ತಾನೆ. ನನಗೆ ಓದಲು ಹಾಗೂ ಬರೆಯಲು ಬರುವುದಿಲ್ಲ. ನಾನು ಹಾಜರುಪಡಿಸಿದ ದಾಖಲೆಗಳು ಮನೆಗೆ ಸಂಬಂದಪಟ್ಟ ದಾಖಲೆಗಳು ಇರುತ್ತವೆ. ನಿಪಿ-1 ರ ಮೇಲೆ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯ ಸಹಿ, ದಿನಾಂಕ ಮತ್ತು ಸ್ಥಳ ನಮೂದಿಸಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಾಗುವುದಿಲ್ಲ ಎಂದು ಉತ್ತರಿಸುತ್ತಾರೆ. ಸಾಕ್ಷಿ ಮುಂದುವರೆದು ಇಲ್ಲ ಎಂದು ಉತ್ತರಿಸುತ್ತಾರೆ. ನಿಪಿ-2 ರಲ್ಲಿ ಪಂಚಾಯಿತಿ ಹೆಸರು ಹಾಗೂ ಇತರೆ ಕಾಲಂಗಳು ಖಾಲಿ ಬಿಟ್ಟಿದ್ದಾರೆ ಎಂದರೆ ನಿಜ. ಮುದುಕಪ್ಪನ ಹೆಂಡತಿ ಮತ್ತು ಮಕ್ಕಳು ತಹಶೀಲ್ದಾರ ಕಚೇರಿಗೆ ಬಂದು ಸಹಿ ಮಾಡಿ ಕೊಟ್ಟಿರುತ್ತಾರೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ. ಯಾವುದೇ ಮನೆಗೆ ವಿದ್ಯುತ್ ಸಂಪರ್ಕ ಕೊಡುವ ಪೂರ್ವದಲ್ಲಿ ಆ ಮನೆ

ಯಾರ ಹೆಸರಿನಲ್ಲಿ ಇರುತ್ತದೆ ಅವರ ಹೆಸರಿನಲ್ಲಿ ಕೊಡುತ್ತಾರೆ ಎಂದರೆ ನಿಜ. 1999 ರಿಂದ ಮನೆಯ ವಿದ್ಯುತ್ ಸಂಪರ್ಕ ಹನುಮಂತಪ್ಪನ ಹೆಸರಿನಲ್ಲಿ ಇತ್ತು ಎಂದರೆ ಸಾಕ್ಷಿ ಜಂಟಿಯಾಗಿತ್ತು ಎಂದು ಉತ್ತರಿಸುತ್ತಾರೆ. ಯಾರ ಹೆಸರಿನಲ್ಲಿ ಜಾಗ ಇರುತ್ತದೆ ಅವರ ಹೆಸರಿನಲ್ಲಿ ಮನೆ ಕಟ್ಟಲು ಪಂಚಾಯಿತಿಯವರು ಅನುಮತಿ ಕೊಡುತ್ತಾರೆ ಎಂದರೆ ನಿಜ. 1999 ರಿಂದ ಮನೆ ನಮ್ಮ ಮಾವನ ಹೆಸರಿನಲ್ಲಿತ್ತು, ನಾನು ಮತ್ತೆ ಮನೆ ಕಟ್ಟಿಸಿಕೊಳ್ಳುವ ಪ್ರಶ್ನೆ ಬರುವುದಿಲ್ಲ ಎಂದರೆ ಸರಿಯಲ್ಲ. ಪಂಚಾಯಿತಿ ಅಧಿಕಾರಿಗಳೊಂದಿಗೆ ನಾನು ಶಾಮಿಲಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿ ಮನೆ ಮಂಜೂರಾತಿ ಆದೇಶ ತಯಾರಿಸಿರುತ್ತೇವೆ ಎಂದರೆ ಸರಿಯಲ್ಲ. ನನಗೆ ಸರಕಾರದ ಯಾವುದೇ ಯೋಜನೆ ಅಡಿ ಮನೆ ಕಟ್ಟಲು ಅನುಮತಿ ಇರಲಿಲ್ಲ ಎಂದರೆ ಸರಿಯಲ್ಲ. ವಯಸ್ಸಾದ 4 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆಯನ್ನು ದಾಖಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದಿರುವ ಎಲ್ಲಾ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಗಳು, ಕಾರಟಗಿ.
(ಸಂಚಾರಿ ನ್ಯಾಯಾಲಯ ಕಾರಟಗಿ)